ಲಿಂಗಸಮಾನತೆಯ (ಜೆಂಡರ್ ಈಕ್ವಾಲಿಟಿ) ಚರ್ಚೆ ಕಳೆದ ಹಲವಾರು ದಶಕಗಳಿಂದ ಎಲ್ಲಾ ದೇಶಗಳಲ್ಲೂ ನಡೆಯುತ್ತಿದೆ. ಶತಶತಮಾನಗಳಿಂದ ಪುರುಷಪ್ರಧಾನ ಸಮಾಜದಲ್ಲಿ ಬದುಕುತ್ತಿದ್ದು ಪುರುಷರ ದಬ್ಬಾಳಿಕೆಗೆ, ಅಧಿಕಾರ ಸ್ಥಾಪನೆಗೆ ದಾಳವಾಗಿ ಉಪಯೋಗಿಸಲ್ಪಡುತ್ತಿದ್ದ ಮಹಿಳೆಯರಿಗೆ ಎಲ್ಲಾ ರಂಗಗಳಲ್ಲಿಯೂ ಸಮಾನ ಸ್ಥಾನಮಾನ ಮತ್ತು ಕಾನೂನಿನ ಹಕ್ಕು, ಅಧಿಕಾರಗಳಿರಬೇಕು ಎನ್ನುವುದು ಈ ಚಿಂತನೆಯ ಹಿಂದಿರುವ ನ್ಯಾಯಯುತವಾದ ಬೇಡಿಕೆ. ಹಲವಾರು ದೇಶಗಳಲ್ಲಿ ಇಂತಹ ಬೇಡಿಕೆಗೆ ಸಾಕಷ್ಟು ಮನ್ನಣೆ, ಮಾನ್ಯತೆಗಳು ಸಿಕ್ಕಿದ್ದರೂ ಸಂಪೂರ್ಣ ಲಿಂಗಸಮಾನತೆ ಇನ್ನೂ ಬಹಳ ದೂರದ ದಾರಿಯಾಗಿಯೇ ಉಳಿದಿದೆ. ನಮ್ಮ ದೇಶದಲ್ಲಿ ಏಕರೂಪದ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವ ಬಗೆಗೆ ನಾಗರಿಕರನ್ನು ಚರ್ಚೆಗೆ ಆಹ್ವಾನಿಸಿರುವ ಕೇಂದ್ರ ಸರ್ಕಾರ, ಇದರಲ್ಲಿ ಲಿಂಗಸಮಾನತೆಯ ಅಂಶಗಳನ್ನು ಸೇರಿಸುವ ಉದ್ದೇಶವಿದೆ ಎಂದು ಹೇಳಿಕೊಂಡಿದೆ.

ಮೇಲೆ ಹೇಳಿರುವುದೆಲ್ಲಾ ಕಾನೂನಿನ ಮತ್ತು ಸಾಮಾಜಿಕ ಸ್ಥಾನಮಾನಗಳಿಗೆ ಸಂಬಂಧಪಟ್ಟದ್ದಾಯಿತು. ಇಂತಹ ಕಾನೂನುಗಳು ಇಲ್ಲದಿದ್ದಾಗಲೂ ಲಿಂಗಸಮಾತೆಯನ್ನು ಬಯಸುವ ಸಾಕಷ್ಟು ಜನ ತಮ್ಮ ಮನೆಗಳಲ್ಲಿ ಅದನ್ನು ಪಾಲಿಸುವುದು ಸಾಧ್ಯವಾಗಬೇಕಿತ್ತು. ಆದರೆ ವಾಸ್ತವದಲ್ಲಿ ಇದು ಸಾಧ್ಯವಾಗುತ್ತಿದೆಯೇ? ಸಾವಿರಾರು ವರ್ಷಗಳಿಂದ ಅನುಭವಿಸಿಕೊಂಡು ಬಂದಿರುವ ಅಧಿಕಾರವನ್ನು ಬಿಟ್ಟುಕೊಡಲು ಪುರುಷರು ಸಿದ್ಧರಿದ್ದಾರೆಯೇ? ಅಥವಾ ಸ್ತ್ರೀಯರು ಸಮಾನ ಸ್ಥಾನಮಾನಗಳನ್ನು ಒಪ್ಪಿಕೊಳ್ಳಲು ಮಾನಸಿಕವಾಗಿ ತಯಾರಾಗಿದ್ದಾರೆಯೇ? ಲಿಂಗ ಅಸಮಾನತೆಯನ್ನು (ಜೆಂಡರ್ ಇನ್‌ಈಕ್ವಾಲಿಟಿ) ನಾವೆಲ್ಲಾ ಹೇಗೆ ಮಕ್ಕಳ ಮನಸ್ಸಿನಲ್ಲಿ ನಯವಾಗಿ ದಿನನಿತ್ಯ ಬೇರೂರಿಸುತ್ತಿರುತ್ತೇವೆ?

## ಲಿಂಗಸಮಾನತೆ ಎಂದರೇನು?

ನಮ್ಮಲ್ಲಿ ಹೆಚ್ಚಿನವರ ಮನೆಗಳಲ್ಲಿ ಕಳೆದ ಕೆಲವು ದಶಕಗಳಿಂದ ಹೆಣ್ಣುಮಗುವಿಗೆ ಗಂಡು ಮಗುವಿನ ಸಮಾನ ಸ್ಥಾನ ಸಿಗುತ್ತಿದೆ. ಊಟ, ಉಡುಗೆ– ತೊಡುಗೆ, ವಿದ್ಯಾಭ್ಯಾಸ ಹಾಗೂ ಉದ್ಯೋಗ, ಸಂಗಾತಿಯ ಆಯ್ಕೆ ಮುಂತಾದ ಸಾಕಷ್ಟು ವಿಚಾರಗಳಲ್ಲಿ ಹೆಣ್ಣುಮಗುವನ್ನು ಗಂಡಮಗುವಿಗಿಂತ ಭಿನ್ನವಾಗಿ ನೋಡದಿರುವ ಮಾದರಿ ಕುಟುಂಬಗಳು ಸಾಕಷ್ಟು ಇವೆ ಎನ್ನುವುದು

